**CW : 9**

PW : 6

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.2/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಆನಂದ ಕೆ |
| ತಂದೆಯ ಹೆಸರು | : | ಕೂಸಪ್ಪ |
| ಪ್ರಾಯ | : | 43 ವರ್ಷ |
| ಉದ್ಯೋಗ | | ಆಟೋ ಚಾಲಕ |
| ವಾಸಸ್ಥಳ | : | ನಿಡ್ಪಳ್ಳಿ ಗ್ರಾಮ |

ದಿನಾಂಕಃ**12.05.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ನಿಪಿ.6 ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ನಿಪಿ.6 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.6ಬಿ ಎಂದು ಗುರುತಿಸಲಾಯಿತು. ನಿಪಿ.6ಕ್ಕೆ ನಾನು ಸುಮಾರು 3 ವರೆವರ್ಷಗಳ ಹಿಂದೆ ಸಂಪ್ಯ ಪೊ. ಠಾಣೆಯಲ್ಲಿ ಸಹಿ ಮಾಡಿದ್ದೇನೆ.

ಆ ದಿನ ಪೋಲಿಸರು ರತ್ನ ಎನ್ನುವವರಿಗೆ ಚಿನ್ನದ ಕರಿ ಮಣಿ ಸರದ ಅರ್ಧ ಭಾಗವನ್ನು ಕೊಟ್ಟರು. ಆಕಾಲದಲ್ಲಿ ಮಹಜರು ಮಾಡಿದ್ದರು. ಆಗ ನಾನು ಮಹಜರಿಗೆ ಸಹಿ ಮಾಡಿದ್ದೇನೆ. ನನ್ನ ಸಮಕ್ಷಮ ರತ್ನ ರವರಿಗೆಕೊಟ್ಟ ಚಿನ್ನದ ಕರಿಮಣಿ ಸರದ ಅರ್ಧ ಭಾಗವನ್ನು ನೋಡಿದರೇ ಗುರುತಿಸುತ್ತೇನೆ. ಸಾಕ್ಷಿಯು ನಿಪಿ9 ಭಾವಚಿತ್ರವನ್ನು ನೋಡಿ ಅದರಲ್ಲಿ ತಾನು ಇರುವುದನ್ನು ಮತ್ತು ಚಿನ್ನದ ಕರಿಮಣಿ ಸರದ ಅರ್ಧ ಭಾಗ ಇರುವುದನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃಆರೋಪಿತರ ಪರ ಶ್ರೀ ಎಂ ಪಿ ಕೆ ವಕೀಲರಿಂದಃ

ಠಾಣೆಗೆ ಬರಬೇಕೆಂದು ಪೋಲಿಸರು ನನಗೆ ಲಿಖಿತ ನೋಟಿಸ್ ಕೊಟ್ಟಿರಲಿಲ್ಲ. ನಾನು ಬೆ. 9 ಗಂಟೆ ನಂತರ ಪೊ. ಠಾಣೆಗೆ ಹೋಗಿದ್ದೇನು ನಿರ್ದಿಷ್ಟ ಸಮಯ ಗೊತ್ತಿಲ್ಲ. ನಾನು ಠಾಣೆಯಲ್ಲಿ 45 ನಿ.ಗಳ ಕಾಲ

ಇದ್ದೆನು. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆದಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದ್ದನ್ನು ಬಿಟ್ಟರೆ ನನಗೆ ಬೇರೆ ಏನು ಗೊತ್ತಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.